ಮೂಗಿನ ತುದಿಯಲ್ಲೇ ಮತ್ತೆ ಈ ಸಾಲುಗಳನ್ನು ಇಟ್ಟುಕೊಂಡು ಮಿದುಳೊಳಗೆ ಗುಣಗುಣಿಸಿಕೊಂಡು ರಚ್ಚೆಮಳೆಯಲ್ಲಿ ಸಾಗುತ್ತಿರುವೆ. ಸೋನೆಮಳೆ ಸುರಿಯುತ್ತಿರುವ ಹೆಲ್ಮೆಟ್ಟಿನ ಗಾಜಿನ ಮುಂದೆಯೇ ಸೌಭಾಗ್ಯಲಕ್ಷ್ಮಿ ಮೇಡಂ ಮತ್ತು ಕಂಸಾಳೆಯ ಮೇಷ್ಟರೂ ಸ್ವಲ್ಪ ಹೊತ್ತು ನೃತ್ಯವಾಡಿದರು. ಕೋಣೆಯೊಳಗೆ ಕತ್ತಲೆಯ ಇರುಳು. ಬೀದಿಯಿಂದ ಒಳ ಇಣುಕುತ್ತಿರುವ ನವರಾತ್ರಿಯ ದೀಪಮಾಲೆಗಳ ಬೆಳಕು. ಆ ಬೆಳಕಲ್ಲಿ ಸೌಭಾಗ್ಯಲಕ್ಷ್ಮಿ ಮೇಡಂ ಕಂಸಾಳೆ ಮೇಷ್ಟರ ಹೊಟ್ಟೆಯ ಮೇಲೆ ಕುಳಿತು ಎದೆ ತೋರಿಸಿಕೊಂಡು ಓಲಾಡುತ್ತಿದ್ದರು. ಕಿಟಕಿಯ ಜಾಲರಿಯಿಂದ ನೋಡಬಾರದ್ದನ್ನು ನೋಡಿದ ನನಗೆ ಸೌಭಾಗ್ಯಲಕ್ಷ್ಮಿ ಮೇಡಂ ಶಪಿಸಿದ್ದರು.

'ಸಾಯುವ ಕಾಲಕ್ಕೆ ನೀನು ಒಂಟಿ ಪಿಶಾಚಿಯಾಗಿ ಸಾಯುತ್ತೀಯಾ' ಎಂದು ಕಣ್ಣೀರು ಹಾಕಿದ್ದರು. ಕಂಸಾಳೆಯ ಮೇಷ್ಟರು ವಿಷಣ್ಣರಾಗಿ ನಕ್ಕಿದ್ದರು. 'ಬೇಕಾದರೆ ನೀನೂ ಒಂದು ಸಲ ಅನುಭವಿಸು. ಆದರೆ ಯಾರಿಗಾದರೂ ಹೇಳಿ ಮಾನ ಕಳೆಯ ಬೇಡವೋ ರಾಜಕುಮಾರಾ...' ಕಂಸಾಳೆಯ ಮೇಷ್ಟರು ಗೋಗರೆದಿದ್ದರು. ಆಮೇಲೆ ಅತ್ತಿದ್ದರು.

ಅದೇ ನಮ್ಮ ಕೊನೆಯ ಕಂಸಾಳೆ ತಾಲೀಮು. ಸೌಭಾಗ್ಯಲಕ್ಷ್ಮಿ ಮೇಡಂ ಎಲ್ಲೋ ದೂರಕ್ಕೆ ವರ್ಗಾವಣೆ ತೆಗೆದುಕೊಂಡು ಹೋಗಿದ್ದರು.

* * *

'ಒಂಟಿ ಪಿಶಾಚಿಯೇ ಸಾಗು ಮುಂದೆ ಸಾಗು' ಜಿಟಿಜಿಟಿ ಮಳೆಯಲ್ಲಿ ನಿಧಾನಕ್ಕೆ ಬೈಕಿನ ವೇಗ ಹೆಚ್ಚಿಸಿ ಕಣ್ಣುಮುಚ್ಚಿಕೊಂಡೆ. ಇನ್ನು ಈ ಬೈಕೇ ನನ್ನನ್ನು ಕರೆದು ಕೊಂಡು ಹೋಗುವ ಬೃಹನ್ನಳೆ. ಅದರ ಕೈಗೆ ನನ್ನನ್ನು ಒಪ್ಪಿಸಿಕೊಂಡೆ.

ಬಹುಶಃ ಜಗತ್ತಿನಲ್ಲೇ ನಿದ್ದೆಯಲ್ಲೇ ಬೈಕು ಓಡಿಸುವ ಏಕೈಕ ಫೋಟೊಗ್ರಾಫರನಾಗಿರಬೇಕು ನಾನು. ಆದರೆ, ಪುಣ್ಯಕ್ಕೆ ಯಾರಿಗೂ ಈ ವಿಷಯ ಗೊತ್ತಿಲ್ಲ. ಈ ನಗರದ ಮೆರವಣಿಗೆಗಳು, ಧರಣಿಗಳು, ಸಮ್ಮೇಳನಗಳು, ಪ್ರವಾಹಗಳು, ದರೋಡೆಗಳು, ಸಿನೆಮಾ ಶೂಟಿಂಗುಗಳು ಎಲ್ಲ ಕಡೆಯಲ್ಲೂ ನಿದ್ದೆಗಣ್ಣಲ್ಲಿ ಬೈಕು ಓಡಿಸುತ್ತಾ ಫೋಟೊ ಕ್ಲಿಕ್ಕಿಸುತ್ತೇನೆ. ನಗಾರಿ, ಕಂಸಾಳೆ, ಪೋಲೀಸು ಬ್ಯಾಂಡು, ಅಶ್ವದಳ, ಅಂಬಾರಿ, ತಾಯಿ ಭುವನೇಶ್ವರಿ, ಮುಖ್ಯಮಂತ್ರಿ, ಜಿಲ್ಲಾಧಿಕಾರಿ, ಮೇಯರ್, ಒಂದೊಂದು ಚಿತ್ರಕ್ಕೂ ಒಂದೊಂದು ತಲೆಬರಹ ತಲೆಯೊಳಗೇ ಬರೆದುಕೊಂಡು ಕ್ಲಿಕ್ಕಿಸುತ್ತಾ ನಡೆಯುತ್ತೇನೆ.

* * *

ಒಂದೇ ಒಂದು ಸಲ ಕಾವೇರಿ ಗಲಾಟೆಯ ಸಮಯದಲ್ಲಿ ನಿದ್ದೆಯಲ್ಲೇ ಓಡಿಸುತ್ತಾ ಸಿದ್ದಲಿಂಗಪುರದ ಬಳಿ ಗಾಳಿ ಮರವೊಂದಕ್ಕೆ ಡಿಕ್ಕಿ ಹೊಡೆದದ್ದು ಬಿಟ್ಟರೆ ಒಂದು ಸಲವೂ ನನ್ನ ಈ ಪುರಾತನ ಡೀಸೆಲ್ ಬೈಕ್ ನನಗೆ ಕೈಕೊಟ್ಟಿಲ್ಲ. ಹಾಗೆ ಒಂದು ಸಲ ಕೈಕೊಟ್ಟಾಗ ಹದಿನೈದು ದಿನ ದೊಡ್ಡಾಸ್ಪತ್ರೆಯ ಕಲ್ಲು ಬಿಲ್ಡಿಂಗಿನಲ್ಲಿ ಕಾಲಿಗೆ ರಾಡು ಹಾಕಿಸಿಕೊಂಡು ಮಲಗಿದ್ದೆ. ಹೆಂಡತಿ ಸಾಕುಂತಲೆ ತನ್ನ ಸೆರಗಿನಿಂದ ಜೋರಾಗಿ ಗಾಳಿ ಬೀಸುತ್ತಾ ಅಷ್ಟೇ ದೊಡ್ಡದಾಗಿ ಬಾಯಿ ತೆರೆದು ನನ್ನ ಗುಣಗಾನ ಮಾಡುತ್ತಾ ರಂಪ ತೆಗೆದಿದ್ದಳು.

'ಮಳೆಗಾಲವು ಕಳೆದು, ಕಪ್ಪಗಿನ ಮೋಡಗಳು ಬಿಳುಪಾಗಿ, ಹಗಲು ಆಗಸದಲ್ಲಿ ದಿನಮಣಿ ಸೂರ್ಯನ ಬೆಳಕು ಬೆಳಗಿ, ಇರುಳ ಆಗಸದಲ್ಲಿ ಚಂದಿರನ ಹೊಳಪು ಮಿನುಗಿ, ಉಕ್ಕಿದ್ದ ನದಿಗಳು ಶಾಂತವಾಗಿ, ಆಕಾಶ ಮಾರ್ಗದಲ್ಲಿ ಹಂಸಗಳು ಹಾರಿ ಬಂದು, ಕೊಳದಲ್ಲಿ ತಾವರೆಗಳು ಅರಳಿ, ತಲೆಯ ಮೇಲೆ ಅರಳೆಹತ್ತಿ ಗಳಂತಹ ತೆಳು ಮೋಡಗಳು ತೇಲಿ, ಮೈಸೂರಿನ ಮಹಾರಾಜರು ಯುದ್ಧಕ್ಕೆ ಹೋಗಿದ್ದವರು ಶಹರಿಗೆ ಮರಳಿ ವಿಜಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧರಾಗುತ್ತಿದ್ದ ಕಾಲ.'

ಸೌಭಾಗ್ಯಲಕ್ಷ್ಮಿ ಮೇಡಂ ಮುಖವನ್ನು ಕಣ್ಣಿಗೆ ತಂದುಕೊಂಡು ಅವರ ಸಾಲುಗಳನ್ನು ಮೂಗಿನ ತುದಿಯಲ್ಲಿಟ್ಟುಕೊಂಡು ನಿದ್ದೆಗೆ ಜಾರಿದ್ದವನು ಎದ್ದಾಗ ದೊಡ್ಡಾಸ್ಪತ್ರೆಯ ಕಲ್ಲು ಬಿಲ್ಡಿಂಗಿನಲ್ಲಿದ್ದೆ.

ಬಳ್ಳೆ ಆನೆಕ್ಯಾಂಪಿನ ಜೇನು ಕುರುಬರ ಅಣ್ಣಯ್ಯ, ಅಷ್ಟು ಮೇಲಕ್ಕೆ ಸೆರಗು ಎತ್ತಿ ಅಷ್ಟೇ ದೊಡ್ಡ ಬಾಯಲ್ಲಿ ನನ್ನ ಗುಣಗಾನ ಪಾಡುತ್ತಿದ್ದ ಹೆಂಡತಿ ಸಾಕುಂತಲೆಯ ಅಷ್ಟು ದೊಡ್ಡ ಮೊಲೆಗಳನ್ನು ಪುಟ್ಟ ಮಗುವಿನಂತೆ ಕಕ್ಕಾವಿಕ್ಕಿಯಾಗಿ ನೋಡುತ್ತಿದ್ದ. ಅದನ್ನು ನೋಡಲಾಗದೆ ಚಡಪಡಿಸುತ್ತಿದ್ದ ಟೀ ಮಾರುವ ಮಲಯಾಳೀ ಮಾದೇವಣ್ಣ ಕೆಮ್ಮಿ ಕ್ಯಾಕರಿಸಿ ಆಸ್ಪತ್ರೆಯ ಕಿಟಕಿಯಿಂದ ಹೊರಕ್ಕೆ ಉಗಿದು ಕೈಗೆ ಟೀ ಕೆಟಲು